ಅವರು ದುಡಿದು ಮೇಲೆ ಬಂದು ಸಮಾಜಕ್ಕೆ ಹೊರೆಯಾಗುವ ರೀತಿಯಲ್ಲಿ ಸ್ವತಂತ್ರ ಜೀವನ ಮಾಡುವುದಕ್ಕೆ ಈ ಇಲಾಖೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ನಾನಾ ಇಲಾಖೆಗಳು ಸೇರಿ ಒಂದು comprehensive programme ಅನ್ನು ಮಾಡಿ ಅವರು ಬದುಕುವುದಕ್ಕೆ ಕಾಲಾವಕಾಶಗಳನ್ನು ಕೊಡುವುದಕ್ಕೆ ತಕ್ಷಣ ಒಂದು ನಾಲ್ಕೈದು ಇಲಾಖೆಗಳು ಹಣಕಾಸಿನ ಇಲಾಖೆಯವರ ಜೊತೆಯಲ್ಲಿ ಸೇರಿ ಸಭೆಯನ್ನು ಮಾಡಿ ಅವರು ಬದುಕುವಂತಹ ವಾತಾವರಣವನ್ನು ಸ್ವತಂತ್ರವಾಗಿ ನಿರ್ಮಾಣ ಮಾಡಬೇಕು.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ: ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಈ ಸಲಹೆಯನ್ನು ಸರ್ಕಾರವು ಗಂಭೀರವಾಗಿ ತೆಗೆದುಕೊಂಡು ಅದು ಹಣಕಾಸು ಇಲಾಖೆ ಇರಬಹುದು, ಬೇರೆ ಬೇರೆ ಇಲಾಖೆಗಳ ಜೊತೆಯಲ್ಲಿ ಚರ್ಚೆ ಮಾಡಿ, ಅವರ ಉಪಜೀವನಕ್ಕೆ ಏನು ಮಾಡಬೇಕು, ಅದನ್ನು ಸರ್ಕಾರ ಖಂಡಿತವಾಗಿ ಮಾಡುತ್ತದೆಂದು ನಾನು ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಶ್ರೀಮತಿ ಭಾಗೀರಥಿ ಮರುಳ ಸಿದ್ದನಗೌಡ ತಾವು ಪ್ರಶ್ನೆಯನ್ನು ಕೇಳಿ.

ಕೊಟ್ಟೂರು ಮತಕ್ಷೇತ್ರದ ಸಾರ್ವಜನಿಕ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿಗಳ ಕೊರತೆಯ ಬಗ್ಗೆ.

197 (1269) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲ್ಲೂಕು ಕೊಟ್ಟೂರು ಮತಕ್ಷೇತ್ರದ ಆಸ್ಪತ್ರೆಗಳಲ್ಲಿ (ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ) ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಇ) ಈ ಮತಕ್ಷೇತ್ರದಲ್ಲಿ ಸಿಬ್ಬಂದಿಗಳ ವಸತಿ ಗೃಹ ಕಟ್ಟಡಗಳು ಪ್ರಾರಂಭಗೊಂಡಿದ್ದು, ಹಣದ ಕೊರತೆಯಿಂದಾಗಿ ಅಪೂರ್ಣಗೊಂಡಿರುವುದರಿಂದ ಇವುಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಬಂದಿದೆ.

(ಆ) ಖಾಲಿ ಇರುವ ಹುದ್ದೆಗಳಲ್ಲಿ ವಿಶೇಷ ನೇರ ನೇಮಕಾತಿ ಮುಖಾಂತರ 500 ವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಅನುಮತಿ ನೀಡಿದ್ದು, ಮೊದಲನೇ ಹಂತದಲ್ಲಿ 250 ವೈದ್ಯಾದಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. 2 ನೇ ಹಂತದಲ್ಲಿ 250 ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸಂದರ್ಶನಗಳನ್ನು ನಡೆಸಲಾಗಿತ್ತು. ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತಾರೆ. ಹಾಗೂ ವಿಶೇಷ ನೇರ ನೇಮಕಾತಿ ಮುಖಾಂತರ 2807 ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಮತ್ತು ಎಂ.ಬಿ.ಬಿ.ಎಸ್. ವೈದ್ಯರು ಇಲ್ಲದ ಕಡೆ ಆಯುಷ ವೈದ್ಯರನ್ನು ನೇಮಕ ಮಾಡಲಾಗುತ್ತಿದೆ.

(ಇ) ಕೊಟ್ಟೂರು ಮತಕ್ಷೇತ್ರದಲ್ಲಿ ಸಿಬ್ಬಂದಿಗಳ ವಸತಿ ಗೃಹ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಹಣಕಾಸಿನ ಲಭ್ಯತೆ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀಮತಿ ಟಿ. ಭಾಗೀರಥಿ ಮರುಳಸಿದ್ದನಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಇಲ್ಲ, ಮೊನ್ನೆ ದಿನ ನಾನು ಕೇಳಿದಂತಹ ಪ್ರಶ್ನೆಯಲ್ಲಿ ಈಗಾಗಲೇ ಮನಗೆ ವೈದ್ಯಾಧಿಕಾರಿಗಳನ್ನು ಮತ್ತು ಒಂದು ಟ್ರಾಮಾ ಸೆಂಟರ್‌ನ್ನು full pledged ಆಸ್ಪತ್ರೆ ಮಾಡಬೇಕೆಂದು ಹೇಳಿದಾಗ ಅವರು ಆಂಬ್ಯುಲೆನ್ಸ್‌ನ್ನು ಕೊಟ್ಟಿದ್ದಾರೆ. ಅಲ್ಲಿ ಸ್ವಲ್ಪ ಮಟ್ಟಿಗೆ ಕೆಲಸಗಳು ಆಗಿದೆ. ಇವತ್ತು ಹಳ್ಳಿಗಳಲ್ಲಿ ಡಾಕ್ಟರ್‌ಗಳು ಏತಕ್ಕಾಗಿ ವಾಸ ಮಾಡುತ್ತಿಲ್ಲ. ಎನ್ನುವುದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ನನ್ನ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, 25 ವಸತಿ ಗೃಹಗಳು ನಿರ್ಮಾಣವಾಗಿ ಮುಕ್ಕಾಲು ಹಂತದಲ್ಲಿ ನಿಂತಿದೆ, ನಾನು ಪ್ರತಿಬಾರಿ ಈ ಬಗ್ಗೆ ಕೇಳುತ್ತಿದ್ದೇನೆ. ಒಂದು ರೂಪಾಯಿ ಕೆಲಸದಲ್ಲಿ 80 ಪೈಸೆಯನ್ನು ಕೆಲಸಗಳು ಆಗಿದೆ. ಇನ್ನು 20 ಪೈಸೆ ಕೆಲಸದ ಬಗ್ಗೆ ಬಿಡುಗಡೆ ಮಾಡುವುದಕ್ಕೆ ಏನು ತೊಂದರೆ ಇದೆ? ಹೀಗಾಗಿ ಅಲ್ಲಿ ಡಾಕ್ಟರ್‌ಗಳು ವಾಸ ಮಾಡುತ್ತಿಲ್ಲ. ಪ್ರತಿಬಾರಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಮಾಡುತ್ತೇನೆಂದು ಹೇಳುತ್ತಿದ್ದಾರೆ. ಇಷ್ಟು ಕೆಲಸವನ್ನು ತಾವು ಮಾಡಿಕೊಟ್ಟರೆ ನನ್ನ ಕ್ಷೇತ್ರದಲ್ಲಿ ಎಲ್ಲಾ ಡಾಕ್ಟರ್‌ಗಳು ವಾಸ ಮಾಡುತ್ತಾರೆ. ಸಿಬ್ಬಂದಿ ವರ್ಗದವರು ಕೂಡ ಅಲ್ಲಿಯೇ ವಾಸ ಮಾಡುತ್ತಾರೆ ಎಂಬ ಬಗ್ಗೆ ತಾವು ಸಭಾಧ್ಯಕ್ಷರ ಮೂಲಕವಾಗಿ ಸ್ಪಷ್ಟವಾಗಿ ಹೇಳಬೇಕು. ತಾವು ಮಾಡುವುದಕ್ಕೆ ಆಗದಿದ್ದರೆ ನಮಗಾದರೂ ಬಿಡಿ ನಾವು ಯಾವುದಾದರೂ

ಅನುದಾನದಲ್ಲಿ ಮಾಡಿಕೊಳ್ಳುತ್ತೇವೆ. ಅಲ್ಲಿ ಯಾವುದಕ್ಕೂ ಕೂಡ ಅವಕಾಶಗಳು ಇಲ್ಲ. ದಯವಿಟ್ಟು ನಾನು ಸಭಾಧ್ಯಕ್ಷರ ಮೂಲಕವಾಗಿ ಈ ಬಗ್ಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಗ್ರಾಮಾಂತರದಲ್ಲಿರುವಂತಹ ವೈದ್ಯರ ಕೊರತೆಯ ಬಗ್ಗೆ ಕೇಳಿದ್ದಾರೆ. ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ. 500 ಜನ ವೈದ್ಯರ ನೇಮಕಾತಿಯಲ್ಲಿ 250 ವೈದ್ಯಾಧಿಕಾರಿಗಳು ನೇಮಕಾತಿಯಾಗಿ palcement ಎಲ್ಲಾ ಕೊಡುವ ಹಂತದಲ್ಲಿದೆ. ಇನ್ನೂ 250 ವೈದ್ಯರ ಬಗ್ಗೆ ಪ್ರಯತ್ನಗಳು ನಡೆದಿವೆ. ಇದು ಅಲ್ಲದೆ ಉಳಿದಿರುವಂತಹ ಬಾಕಿಗೆ ಆಯಾಯ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಎಂಬಿಬಿಎಸ್ ಡಾಕ್ಟರ್ ಅಥವಾ ಬಿಎಎಂಎಸ್ ಡಾಕ್ಟರ್ ಯಾರು ಇರುತ್ತಾರೆ ಅವರನ್ನು ಹಂಗಾಮಿಯಾಗಿ ತೆಗದುಕೊಳ್ಳಬೇಕೆಂದು ತೀರ್ಮಾನ ಆಗಿದೆ. ಈ ರೀತಿಯಾಗಿ 2807 ಜನ ಪ್ಯಾರಾ ಮೆಡಿಕಲ್ ಸ್ಟಾಫ್, supportive staff ಅವರ ನೇಮಕಾತಿಯ ಬಗ್ಗೆಯೂ ಸಹ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಅವರು ಎರಡನೆಯದು ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಅವರ ಕ್ಷೇತ್ರದಲ್ಲಿ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಸತಿ ಕಟ್ಟಡಗಳು ಅರ್ಧ ಆಗಿದೆ ಶೇಕಡಾ 80 ಆಗಿದೆ ಎಂದು ಹೇಳಿದ್ದಾರೆ. ಅಲ್ಲಿ ತೊಂದರೆ ಏನಾಯಿತು ಎಂದರೆ ಬಳ್ಳಾರಿ ಪ್ಯಾಕೇಜ್ ನಲ್ಲಿ ಸುಮಾರು 18 ಕೋಟಿ ರೂಪಾಯಿಗಳು ಆರೋಗ್ಯ ಇಲಾಖೆಗೆ ಬರುವಂತಹದ್ದು ಆ ಪೈಕಿ ಹೆಚ್ಚು ಕಡಿಮೆ 9 ಕೋಟಿ ರೂಪಾಯಿಗಳು ಬಂದಿದೆ. ಅದರ ಕೆಲಸಗಳು ಆಗಿವೆ. 512 ಕಟ್ಟಡಗಳ ಪೈಕಿ 354 ಕಟ್ಟಡಗಳು ಆಗಿವೆ. ಉಳಿದಂತಹ 4 ಪ್ರಮುಖವಾದಂತಹ ಹೆಡ್‌ನಲ್ಲಿ ಅವರ ಕ್ಷೇತ್ರದಲ್ಲಿ ಬಾಕಿ ಇದೆ. ಆಲೂರು ಪ್ರಾಥಮಿಕ ಆರೋಗ್ಯ ಘಟಕ ಇರಬಹುದು, ಚಿಕ್ಕಜೋಗಿಹಳ್ಳಿ 16 ವಸತಿಗೃಹಗಳ ಪೈಕಿ ಕೊನೆಯ ಹಂತದ್ದು ಬಾಕಿ ಇದೆ. ಬೆಳ್ಳಿಬೆಟ್ಟ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳ ವಸತಿ ಗೃಹ ಮತ್ತು ಶವಾಗಾರ. ಅದೇ ರೀತಿಯಾಗಿ ಇನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದಕ್ಕೆ ನಮಗೆ ದುಡ್ಡು ಬರಬೇಕೆಂದು ಹೇಳಿದ್ದೇವೆ. ಆದರೂ ಸಹ ತಾವು ಈಗ ಹೇಳಿದ ಪ್ರಕಾರ ಶೇಕಡಾ 80 ಆಗಿದೆ. ಅದು ಮುಕ್ತಾಯದ ಹಂತದಲ್ಲಿದೆ ಎಂದು ಹೇಳಿದ್ದಾರೆ. ಅದನ್ನು ಆದ್ಯತೆಯ ಮೇರೆ ಎಲ್ಲಿಂದಲಾದರೂ ಅದಕ್ಕೆ ಆರ್ಥಿಕತೆಯನ್ನು ಜೋಡಿಸಿಕೊಂಡು ಬೇಕಾದಂತಹ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀಮತಿ ಟಿ. ಭಾಗೀರಥಿ ಮರುಳಸಿದ್ದನಗೌಡ: ಈ ಉತ್ತರವನ್ನು ನಾನು ಎರಡು ವರ್ಷಗಳಿಂದಲೂ ಕೂಡ ಕೇಳುತ್ತಿದ್ದೇನೆ. ಈಗ ಆ ಕಟ್ಟಡಗಳ ಗತಿ ಏನು? ಕಿಟಕಿ ಹಾಗೂ ಬಾಗಿಲುಗಳನ್ನು ಇಟ್ಟಾಗಿದೆ. ಸಿಮೆಂಟ್ ರೇಟ್ ಏರುತ್ತಿದೆ, ಇದನ್ನು ಯಾವಾಗ ಮುಗಿಸುವುದಕ್ಕೆ ಸಾಧ್ಯತೆ ಇದೆ? ಕೊನೆಗೆ ನಮ್ಮ ಗ್ರಾಂಟ್ಸ್‌ನಲ್ಲಿ ಯಾರಾದರೂ ಹಾಕಿ maching grant ಎಂದು ಮಾಡಲಿಕ್ಕೂ ಕೂಡ ಸಾಧ್ಯತೆ ಇಲ್ಲ. ಅದಕ್ಕೆ ತಾವು ಅರ್ಧ ಹಣವನ್ನು ಬಿಡುಗಡೆ ಮಾಡಿಬಿಟ್ಟಿದ್ದೀರಿ. ದಯಮಾಡಿ ಅದಕ್ಕೆ ಆದಷ್ಟು ಬೇಗ ಇದೇ ವರ್ಷದಲ್ಲಿ ಈ ಸಂದರ್ಭದಲ್ಲಿ ಬೇಡಿಕೆಯ ಮಂಡನೆಯಾಗುತ್ತದೆ ಈ ಸಂದರ್ಭದಲ್ಲಿ ಮಾಡಿಕೊಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ.

ಡಾ: ವಿ.ಎಸ್. ಆಚಾರ್ಯ: ಆ ಬಗ್ಗೆ ಖಂಡಿತವಾಗಿ ಕಡತದಲ್ಲಿ ಬೇಕಾಗಿರುವಂತಹ ಸೂಚನೆಯನ್ನು ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ: 198 (1505)

ಅಧ್ಯಕ್ಷರು: ಸಿದ್ದು ಸವದಿಯವರೆ ನಿಮ್ಮ ಪ್ರಶ್ನೆ ಸಮಾಜಕಲ್ಯಾಣ ಇಲಾಖೆಯಿಂದ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಸಿದ್ದು ಸವದಿ: ಅದು ಸಮಾಜ ಕಲ್ಯಾಣ ಇಲಾಖೆ ಬರುತ್ತದೆ ಸಾರ್.

ಅಧ್ಯಕ್ಷರು: ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

ಬೆಂಗಳೂರು ಮಹಾನಗರದಲ್ಲಿ ಆಟೋರಿಕ್ಷಾ ಪರ್ಮಿಟ್ ಕುರಿತು

1338 ಶ್ರೀ ಸೀತಾರಾಂ ಎಂ.ಆರ್. (ಮಲ್ಲೇಶ್ವರಂ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 2005–06 ಹಾಗೂ 2006–07 ಸಾಲಿನಲ್ಲಿ ದೇವರಾಜ ಅರಸ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅರ್ಹ ಫಲಾನುಭವಿಗಳಿಗೆ ಆಟೋರಿಕ್ಷಾ ಪರ್ಮಿಟ್‌ಗಳಿಗೆ ತಡೆಯಾಜ್ಞೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ತಡೆಯಾಜ್ಞೆ ತೆರವುಗೊಳಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;